ಬದಲಾವಣೆಯಾದಂತೆ ಘಟನೆಗಳು ಒಂದಕ್ಕೊಂದು ಕಾರಣವಾಗಿ ಬದಲಾವಣೆಯಾಗುತ್ತವೆ. ಭಾಷೆ, ಕಥಾವಸ್ತು ಹಾಗೂ ವಾಸ್ತವಿಕತೆ ಇವರ ಈ ಕಾದಂಬರಿಯಲ್ಲಿ ಪೂರಕವಾಗಿ ಬಂದಿವೆ. ಇವುಗಳಲ್ಲಿ ಒಂದು ಸಾವಯವ ಸಮಗ್ರೀಕರಣವಿರುವುದರಿಂದ ಕಲಾತ್ಮಕತೆ ಪ್ರಾಪ್ತವಾಗಿದೆ. ವಾಸ್ತವತೆಯನ್ನು ಚಿತ್ರಿಸುವಾಗ ಕಲಾತ್ಮಕತೆಗೆ ಅಡ್ಡಿಯಾಗಿಲ್ಲ.

ಈ ಕಾದಂಬರಿಯಲ್ಲಿ ಚಿತ್ರಣಗೊಂಡಿರುವ ಕಥೆ ಸ್ವಾತಂತ್ರ್ಯಪೂರ್ವದಾದ್ದರೂ ಇಂದಿಗೂ ಕೂಡಾ ಪ್ರಸ್ತುತವೇ. ಈಗಿನ ಪರಿಸ್ಥಿತಿಯೂ ಬ್ರಿಟಿಷರ ಆಳ್ವಿಕೆಯ ಪರಿಸ್ಥಿತಿಯಂತೆಯೇ ಇದೆ. ಆಗ ಅಲ್ಲಿ ಬಿಳಿಯರಿದ್ದರು. ಈಗ ತಮ್ಮವರೇ ಇದ್ದು ತಮ್ಮ ಐಷಾರಾಮಿ ಬದುಕಿಗಾಗಿ ರೈತರನ್ನು ಬಡವರನ್ನು ಕೂಲಿ ಕಾರ್ಮಿಕರನ್ನು ಶೋಷಿಸುತ್ತಿದ್ದಾರೆ. ವಿರೋಧಿಸಿದವರನ್ನು ಬಂಧಿಸಿ ಜೈಲಿನಲ್ಲಿಡುತ್ತಿದ್ದಾರೆ. ಇಲ್ಲವೇ ಗಡಿಪಾರು ಮಾಡುತ್ತಿದ್ದಾರೆ. ಜೈಲಿಗೆ ಹೋಗಿರುವ ಇಂತಹ ಬರಹಗಾರರ ಸಾಹಿತ್ಯ 'ಜೈಲು ಸಾಹಿತ್ಯ' ಎಂಬ ಹೆಸರಿನಿಂದಲೇ ಪ್ರಸಿದ್ಧವಾಗಿದೆ. 'ಡೆವಿಲ್ ಆನ್ ದಿ ಕ್ರಾಸ' ಎಂಬ ಗೂಗಿಯ ಕಾದಂಬರಿ ಜೈಲಿನಲ್ಲೇ ಬರೆದದ್ದು. ಆದುದರಿಂದ ಗೂಗಿಯವರ ಎಲ್ಲಾ ಕಾದಂಬರಿಗಳಂತೆ ಈ ಕಾದಂಬರಿಯೂ ರಾಜಕೀಯ ಪ್ರಜ್ಞೆಯುಳ್ಳ ಕಾದಂಬರಿ. ಹೊಸ ಸಮಾಜ ಹೊಸ ರಾಷ್ಟ್ರ ಕಟ್ಟಬೇಕೆಂಬುದು ಅವರ ಆಶಯ.

ಬುಡಕಟ್ಟಿನವರು ಮತ್ತು ಅವರಲ್ಲಿಯೇ ಸುಸಂಸ್ಕೃತರೆನಿಸಿಕೊಂಡವರ ನಡುವಿನ ಸಂಬಂಧಗಳು ಸರಾಗವಾಗಿಲ್ಲ. ಈ ಕಾದಂಬರಿಯ ಮುಖ್ಯ ಪಾತ್ರವಾದ ನುಜರೋಗೆ ಮತ್ತು ಮಿಯಾಕಿಯ ಸಂಬಂಧದ ಬಗೆಗಿನ ವಿವರಗಳಲ್ಲಿ ಇದನ್ನು ಕಾಣಬಹುದು. ಮಿಯಾಕಿಯ ಮನೆಗೆ ಹೋದಾಗ ಅವನಿಗೆ ಅಪರಿಚಿತರ ಮನೆಗೆ ಹೋದಂತೆ ಭಾಸವಾಗಿಬಿಡುತ್ತದೆ. 21ನೇ ಶತಮಾನದಲ್ಲೂ ಸಹ ಕಪ್ಪು ಮನುಷ್ಯ ನಗರೀಕರಣಕ್ಕೆ ಒಳಗಾಗುತ್ತಿದ್ದಾನೆ, ಅನಾಥಪ್ರಜ್ಞೆ ಅನುಭವಿಸುತ್ತಿದ್ದಾನೆ. ಬಿಳಿಯರ ಜಮೀನಿನಲ್ಲಿ ದುಡಿಯುತ್ತಿದ್ದಾನೆ. ಬುಡಕಟ್ಟು ಅಸ್ಮಿತೆಯನ್ನು ಕಳೆದುಕೊಳ್ಳುತ್ತಿದ್ದಾನೆ. ಈ ಕಾದಂಬರಿಯಲ್ಲಿ ಬರೀ ಭೂಮಿಯ ಪ್ರಶ್ನೆ ಮಾತ್ರ ಇಲ್ಲ. ಇದರಲ್ಲಿ ಕಪ್ಪು ಮನುಷ್ಯನ ಭ್ರಮನಿರಸನದ ಚಿತ್ರಣವಿದೆ. ಸ್ವಾತಂತ್ರ್ಯ ಗಳಿಸಿದರೂ ತನ್ನದೇ ಆದ ಜನರಿಂದ ಶೋಷಣೆಗೆ ಒಳಗಾಗುವಂತಹ ಪರಿಸ್ಥಿತಿ ಇದೆ. 'ರಾಷ್ಟ್ರೀಯ ಸಂಸ್ಕೃತಿ ಕಡೆಗೆ' ಎಂಬ ಲೇಖನದಲ್ಲಿ ಗೂಗಿ ಹೇಳುತ್ತಾರೆ, 'ಸ್ವಾತಂತ್ರ್ಯ ಹೋರಾಟ ನಡೆಯುವಾಗ ಪ್ರಭಾವಿಗಳಾದ ಕಪ್ಪು ಜನರ ಹೋರಾಟ ಮಾಡಿದ್ದು ಸವಲತ್ತುಗಳನ್ನು ಪಡೆಯುವುದಕ್ಕಾಗಿ. ಜೊತೆಗೆ, ಬಿಳಿಯರ ಆಳ್ವಿಕೆಯಲ್ಲಿ ಸ್ಥಾನಮಾನಗಳ ರುಚಿಯನ್ನು ಕಂಡಿದ್ದು ಅದನ್ನು ಉಳಿಸಿಕೊಳ್ಳಬೇಕೆಂಬ ಹಂಬಲದಿಂದ. ಆದರೆ, ಆಗ ಬಿಳಿಯರ ಜನಾಂಗ ನೀತಿ ಇತ್ತು. ಈಗ ಆ ನೀತಿ ಇಲ್ಲ. ಬಿಳಿಯರಾಳಿದ್ದ ಪ್ರಭುತ್ವದ ಜೀವನ ಶೈಲಿಗಾಗಿ ನೂಕು ನುಗ್ಗಲು ಉಂಟಾಗಿದೆ'. ಈ ಮಾತುಗಳು ವಸಾಹತುಶಾಹಿ ವ್ಯವಸ್ಥೆಗೆ ಒಳಗಾಗಿದ್ದ ಎಲ್ಲಾ ರಾಜಕೀಯ ವ್ಯವಸ್ಥೆಗಳೂ ಹೆಚ್ಚು ಕಡಿಮೆ ಇದೇ ಅಲ್ಲವೇ? ಗೂಗಿಯು ಸಮಾಜಶಾಸ್ತ್ರಜ್ಞರಾಗಿ, ಮಾನವಶಾಸ್ತ್ರಜ್ಞರಾಗಿ, ರಾಜಕೀಯ ತಜ್ಞರಾಗಿ, ಆರ್ಥಿಕ ವಿಶ್ಲೇಷಣಕಾರರಾಗಿ ತಮ್ಮ ಕಲಾಕೃತಿಗಳಲ್ಲಿ ಆಫ್ರಿಕಾದ ಸ್ಥಿತಿಗತಿಗಳನ್ನು ಹಿಡಿದಿಡುತ್ತಾರೆ. ಇದೊಂದು ಐತಿಹಾಸಿಕ ಕಾದಂಬರಿ ಎಂದು ವಿಮರ್ಶಕರು ಗುರುತಿಸಿದರೂ ಅದನ್ನು ಮೀರಿ ಆಫ್ರಿಕನ್ ರಾಜಕಾರಣದ ಭ್ರಷ್ಟತೆಯ ಸ್ವರೂಪವನ್ನು ಅನಾವರಣಗೊಳಿಸುತ್ತಾ ಮಾನವೀಯ ಮೌಲ್ಯಗಳನ್ನು ಒಳಗೊಳ್ಳುವಂತೆ ಬರವಣಿಗೆಯಲ್ಲಿ ಎಚ್ಚರವಹಿಸುತ್ತಾರೆ.

ಸಿ. ನಾಗಣ್ಣ ಅವರು ಆಫ್ರಿಕನ್ ಸಾಹಿತ್ಯದ ಎಲ್ಲಾ ಪ್ರಕಾರದ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಗೂಗಿಯವರ **'Between the River'** ಕೃತಿಯನ್ನು ಈಗಾಗಲೇ ಅನುವಾದಿಸಿದ್ದು ಈಗ **'Weep not chaild'** ಕೃತಿಯನ್ನು ಕನ್ನಡಕ್ಕೆ ಉತ್ತಮವಾಗಿ ಅನುವಾದಿಸಿದ್ದಾರೆ.